ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 13.02.2026

ಪಾಟೀ ಸವಾಲು ಃ 2 ನೇ ಪ್ರತಿವಾದಿ ಪರ ಶ್ರೀ. ಸಿ.ಎನ್.ಎಂ ವಕೀಲರಿಂದ

1. ನನ್ನ ತಂದೆಯು ದಿನಾಂಕ 07.02.2021 ರಂದು ಮೃತಪಟ್ಟಿರುತ್ತಾರೆ. ನಾನು ಈ ದಿನ ನನ್ನ ಅಜ್ಜಿಯ ಜೊತೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು, ನನ್ನ ಅಜ್ಜಿ ಮತ್ತು ತಾತ ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ, ಪ್ರತಿವಾದಿ 1 ಮತ್ತು 2 ರವರು ದಿನಾಂಕ 08.05.2019 ರಂದು ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರ ಮಾಡಿಕೊಂಡಿದ್ದು ನಾನು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಸದರಿ ಪತ್ರವು ನೋಂದಾಯಿತ ವಿಭಾಗ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜನಿಗೆ ಕಣ್ಣು ಕಾಣುತ್ತಿರಲಿಲ್ಲ ಹಾಗೂ ನನ್ನ ತಂದೆಗೆ ಮದ್ಯಪಾನ ಮಾಡುವ ಹವ್ಯಾಸ ಇದ್ದು ಮದ್ಯಪಾನ ಮಾಡಿದ ಮತ್ತಿನಲ್ಲಿ ಸದರಿ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ತಂದೆಗೆ ವಿಭಾಗದಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಮತ್ತು ಅಜ್ಜನಿಗೆ ಐವತ್ತು ಸಾವಿರ ರೂಪಾಯಿಗಳನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ದಿನ ದಾವಾ ಐಟಂ ನಂಬರ್ 2 ನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯಿಂದ ಪಡೆದ ಹಣವನ್ನು ನನ್ನ ತಂದೆ ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು. 2 ನೇ

ಪ್ರತಿವಾದಿಯು ಸಹ ವಿಭಾಗದ ಹಣದ ಬಾಬ್ತು ನೀಡಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ಅಜ್ಜನು 2 ನೇ ಪ್ರತಿವಾದಿಯ ವಿರುದ್ಧ ಹಿರಿಯ ನಾಗರೀಕರ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಸಿ.ಆರ್ ನಂಬರ್ 27/2022-23 ರಂತೆ ಪಾಂಡವಪುರದ ಉಪ-ವಿಭಾಗಾಧಿಕಾರಿಗಳಿಗೆ ಅರ್ಜಿ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಪ-ವಿಭಾಗಾಧಿಕಾರಿಗಳು ದಾವಾ ಐಟಂ ನಂಬರ್ 1 ರ ಸ್ವತ್ತಿನ ಖಾತೆಯನ್ನು ನನ್ನ ಅಜ್ಜನಾದ 1 ನೇ ಪ್ರತಿವಾದಿಯ ಹೆಸರಿಗೂ ಮತ್ತು ಪ್ರತಿ ತಿಂಗಳು ಐದು ಸಾವಿರ ರೂಪಾಯಿ ಜೀವನಾಂಶ ನೀಡುವಂತೆ ಆದೇಶ ಆಗಿತ್ತು ಎಂದರೆ ಸರಿ. ಸದರಿ ಆದೇಶದ ವಿರುದ್ಧ 2 ನೇ ಪ್ರತಿವಾದಿಯು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ 17893/2023 ರ ರೀತ್ಯಾ ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ವಿಭಾಗದಂತೆ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆಯನ್ನು ಇಡುವಂತೆ ಹಾಗೂ ಐದು ಸಾವಿರ ರೂಪಾಯಿ ಜೀವನಾಂಶ ಕೊಡುವಂತೆ ದಿನಾಂಕ 15.11.2024 ರಂದು ಆದೇಶ ಮಾಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ರೀತ್ಯಾ ಖಾತೆಯು 2 ನೇ ಪ್ರತಿವಾದಿಯ ಹೆಸರಿಗೆ ಆಗಿದ್ದು, ಅದೇ ರೀತಿ ಐದು ಸಾವಿರ ರೂಪಾಯಿ ಹಣವನ್ನು ನನ್ನ ಅಜ್ಜಿ ಮತ್ತು ಅಜ್ಜನಿಗೆ ಪ್ರತಿ ತಿಂಗಳು ನೀಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ಅಜ್ಜನಾದ 1 ನೇ ಪ್ರತಿವಾದಿಯು ದಾವಾ ಐಟಂ ನಂಬರ್ 4 ನ್ನು ನನ್ನ ತಾಯಿಯಾದ 1 ನೇ ವಾದಿಯ ಹೆಸರಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆ

ಎಂದರೆ ಸರಿ. 3 ನೇ ಷೆಡ್ಯೂಲ್ ಆಸ್ತಿಯು 2 ನೇ ಪ್ರತಿವಾದಿಗೆ ಬಿಟ್ಟುಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ತಂಗಿಯಾದ ಚಂದು ಈಗ ಮೃತಪಟ್ಟಿರುತ್ತಾರೆ. ನನ್ನ ಮತ್ತು ನನ್ನ ತಂಗಿಯ ವಿವಾಹ ಮಾಡಲು ವಿಭಾಗದಲ್ಲಿ ಬಂದ ನಾಲ್ಕು ಲಕ್ಷ ರೂಪಾಯಿ ಹಣವನ್ನು ಉಪಯೋಗಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನೇ ಮುಂದೆ ನಿಂತು ನಾಲ್ಕು ಲಕ್ಷ ರೂಪಾಯಿ ಹಣವನ್ನು ಪಡೆದುಕೊಂಡಿದ್ದು ಈಗ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಮತ್ತು ಅವರ ತಾಯಿಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಅಜ್ಜಿ ತಾತ ಪರಸ್ಪರ ಶರೀಕಾಗಿ 2 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು : 3 ನೇ ಪ್ರತಿವಾದಿ ಪರ ಶ್ರೀ. ಕೆ.ಎನ್.ಎಸ್ ವಕೀಲರಿಂದ

1. ನಾನು ಗೃಹಿಣಿ. ನನ್ನ ಅಜ್ಜನಾದ 1 ನೇ ಪ್ರತಿವಾದಿಯನ್ನು ಗೋವಿಂದನಹಳ್ಳಿ ಮೊಗಣ್ಣ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. ನನ್ನ ತಾತನು ಮೂಲತಃ ಕಿಕ್ಕೇರಿ ಹೋಬಳಿ, ಗೋವಿಂದನಹಳ್ಳಿ ಗ್ರಾಮದವರು ಎಂದರೆ ಸರಿ. ನನ್ನ ಅಜ್ಜನಾದ 1 ನೇ ಪ್ರತಿವಾದಿಯ ತಾಯಿಯ ಹೆಸರು ಮರಮ್ಮ ಆಗಿರುತ್ತದೆ ಎಂದರೆ ಸರಿ. ಮರಮ್ಮರವರು ಈಗ ನಾವು ವಾಸವಾಗಿರುವ ಮೋದೂರು ಗ್ರಾಮದವರು ಎಂದರೆ ಸರಿ. ನನ್ನ ಅಜ್ಜನು ನನ್ನ ಅಜ್ಜಿಯನ್ನು ಮದುವೆಯಾದ ನಂತರ ಮೋದೂರು ಗ್ರಾಮಕ್ಕೆ ಬಂದು ನೆಲೆಸಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ಗೋವಿಂದನಹಳ್ಳಿಯಲ್ಲಿರುವ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ.

2. ನನ್ನ ಅಜ್ಜನ ಜೊತೆ ತಾಯಕ್ಕ, ಬಸಮ್ಮ ಎಂಬುವವರು ಜನಿಸಿರುತ್ತಾರೆ. ಅವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಾಯಿ ಮನೆಯಿಂದ ಬಂದ ಸ್ವತ್ತುಗಳು ಎಂದರೆ ಸರಿಯಲ್ಲ. ನನ್ನ ಅಜ್ಜಿಯು ನನ್ನ ತಾಯಿಗೆ ದಾವಾ ಐಟಂ ನಂಬರ್ 4 ನ್ನು ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಮನೆಯಲ್ಲಿ ಈಗ ಯಾರು ವಾಸ ಇರುವುದಿಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿಯ ಅತ್ತೆ ಮಾವ ಈಗ ವಾಸ ಇರುತ್ತಾರೆ ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂಬರ್ 2 ನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸಂಗತಿಯು ನನಗೆ ತಿಳಿದಿಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ಅಜ್ಜ, ನನ್ನ ತಂದೆ, 2 ನೇ ಪ್ರತಿವಾದಿ ಸಹಿ ಮಾಡಿದ ಸಂಗತಿ ನನಗೆ ಗೊತ್ತಿಲ್ಲ. ನನ್ನ ತಂದೆಯು ಕ್ರಯಪತ್ರಕ್ಕೆ ಸಹಿ ಮಾಡಿರುವ ಕಾರಣ ದಾವಾ ಐಟಂ ನಂಬರ್ 2 ರಲ್ಲಿ ನನಗೆ ಯಾವುದೇ ವಿಭಾಗದ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಅದನ್ನು ಮೋಸದಿಂದ ಮಾಡಿಕೊಂಡಿರುವ ಕಾರಣ ನನಗೆ ಹಕ್ಕು ಇದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ವಿರುದ್ಧ ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ. ದಾವಾ ಐಟಂ ನಂಬರ್ 2 ರಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಗೆ ಅಗತ್ಯ ಪಕ್ಷಗಾರರು ಮತ್ತು ಅಗತ್ಯ ಆಸ್ತಿಯನ್ನು ಸೇರಿಸಿಲ್ಲದೆ ಇರುವುದರಿಂದ ನಾನು ಯಾವುದೇ ರೀತಿಯ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು 2 ನೇ ಷೆಡ್ಯೂಲ್

ಆಸ್ತಿಯನ್ನು ಕಾನೂನುಬದ್ಧವಾಗಿ ಕ್ರಯಕ್ಕೆ ಪಡೆದಿರುವ ಸದುದ್ದೇಶದಿಂದ ಕ್ರಯದಾರನಾಗಿರುವ ಕಾರಣ ದಾವಾ ಐಟಂ ನಂಬರ್ 2 ರ ಮೇಲೆ ನನಗೆ ಯಾವುದೇ ವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.